ರಾತ್ರಿ ಅದೆಷ್ಟು ಭಿನ್ನ! ಮೊನ್ನೆ ರಾತ್ರಿ ಕೆಳಗಿನ ಅಪಾರ್ಟ್‌ಮೆಂಟ್‌ಗೆ ಯಾರೋ ಹೊಸದಾಗಿ ಬಂದರು. ರಾತ್ರಿ ಹತ್ತಾದ ಮೇಲಷ್ಟೇ ಊರೊಳಗೆ ಪ್ರವೇಶ ಪಡೆಯುವ ಟ್ರಕ್ ಬಂದು ಕೆಳಗೆ ನಿಂತದ್ದು ಹತ್ತೂವರೆಯ ಹೊತ್ತಿಗೆ. ಆಮೇಲೆ ಆರಂಭವಾದ ಕೂಲಿಯಾಳುಗಳ ಕೂಗಾಟ, ಸಾಮಾನುಗಳ ಸರಿದಾಟ ಹನ್ನೆರಡಾದರೂ ನಿಂತಿರಲಿಲ್ಲ. ಹೊಸ ಜನಕ್ಕೆ ಮನೆ ಅಣಿಗೊಳಿಸಿಕೊಳ್ಳಲು ಹಗಲಿನಲ್ಲಿ ಸಮಯ ಸಿಗಲಿಲ್ಲವೇನೋ, ಊಟದ ಹೊತ್ತಿಗೆ ಶುರುವಾದ ಕುರ್ಚಿ ಮೇಜು ಮಂಚಗಳ ಎಳೆದಾಟ ಕಿರಿಕಿರಿ ಮೂಡಿಸಿ ನಾನು ಒಂಬತ್ತಕ್ಕೇ ಕಿಟಕಿಗಳನ್ನೆಲ್ಲಾ ಮುಚ್ಚಿ ಬೆಡ್‌ರೂಂ ಸೇರಿದೆ. ಅಲ್ಲಂತೂ ಕಿವಿಯ ಕೆಳಗಿದ್ದ ದಿಂಬಿನೊಳಗೇ ಕಿವಿ ಕಿತ್ತುಹೋಗುವಂಥ ಸದ್ದುಗಳು! ನನಗೆ ನಿದ್ದೆ ಬಂದದ್ದೊಂದು ಪವಾಡ ಎಂದೆನಿಸಿದ್ದು ಬೆಳಿಗ್ಗೆ ಕಣ್ಣು ಬಿಟ್ಟಾಗ. ಇಂದಂತೂ ಎಲ್ಲೆಡೆ ಎದೆ ತುಂಬುವಂಥಾ ಮೌನ. ಕೆಳಗಿನ ಹೊಸಬರು ಎಲ್ಲ ಅಣಿಮಾಡಿಕೊಂಡು ನೆಮ್ಮದಿಯಾಗಿ ನಿದ್ದೆ ಹೋಗಿದ್ದಾರೆ. ಅವರ ಜತೆ ಭೂಮಿಯೂ ಮಲಗಿದೆ, ಆಕಾಶಕ್ಕೆ ಹೊದಿಕೆ ಇಡಿಯಾಗಿ ಜಾರಿದ್ದರ ಪರಿವೆಯೂ ಇಲ್ಲದ ಗಾಢನಿದ್ರೆ. ಸಮುದ್ರ ಮಾತ್ರ ಅಪರೂಪದ ಮೋಹಕ ಕನಸಿಗೆ ಸಿಕ್ಕಿ ಮಾದಕವಾಗಿ ಮುಲುಗುವ ಮಧ್ಯವಯಸ್ಸಿನ ಹೆಣ್ಣಿನಂತೆ ತಡೆದೂ ತಡೆದೂ ಮೆಲ್ಲಮೆಲ್ಲನೆ "ಧೂಪ್ ಧುಪ್, ಧೂಪ್ ಧುಪ್, ಧೂಪ್ ಧುಪ್" ಎಂದು ಕನವರಿಸುತ್ತಿದೆ. ಅದರ ಕಣ್ಣಿಗೆ ಕನಸು ಕಟ್ಟಿದವರಾರೆಂದು ಕುತೂಹಲಗೊಂಡು ಅತ್ತ ತಿರುಗಿದೆ.

ಏರಿಳಿಯುತ್ತಿದ್ದ ಅಲೆಗಳ ಮೇಲೆ ನಸು ಬೆಳದಿಂಗಳಿನ ಕೋಲು ಉಲ್ಲಾಸದಿಂದ ಜಿಗಿದಾಡುತ್ತಿತ್ತು, ಸಮುದ್ರದ ಆಚೆ ದಡದಲ್ಲಿ ದಿಗಂತದುದ್ದಕ್ಕೂ ಮುದುಡಿ ಎಸೆದಂತಿದ್ದ ಮುಗಿಲ ಸಾಲಿನ ಹಿಂದೆ ಅವಿತಿದ್ದ ಅಜ್ಞಾತ ಕೈಯೊಂದು ಏನೋ ಕೀಟಲೆಯಲ್ಲಿ ನೀರ ಮೇಲೆ ಬಡಿಯುತ್ತಾ ಆಟವಾಡಿಕೊಳ್ಳುತ್ತಿರುವಂತೆ. ಪಶ್ಚಿಮ ದಿಗಂತದಿಂದ ಒಂದು ಮೊಳ ಮೇಲೆದ್ದಿದ್ದ ಚಂದ್ರ ತನಗೇನೂ ತಿಳಿಯದು ಎನ್ನುವಂತೆ ಅಮಾಯಕವಾಗಿ ನನ್ನತ್ತ ನೋಡುತ್ತಿದ್ದ. ಆದರೆ ಅವನ ಜೋಡಿಕೋಡುಗಳ ಚೂಪು ಮೊನೆಗಳು ಮಾತ್ರ ಅವನು ಮೇಲೆ ಕಾಣುವಷ್ಟು ಅಮಾಯಕನಲ್ಲ ಎನ್ನುವುದನ್ನು ಬಯಲುಮಾಡಿದ್ದವು.

ನೋಡುತ್ತಾ ನಿಂತೆ.

ಎರಡು ನಿಮಿಷಗಳ ನಂತರ ಮರೆತಿದ್ದ ಮಧ್ಯರಾತ್ರಿಯ ಅಭ್ಯಾಸ ಏಕಾಏಕಿ ನೆನಪಿಗೆ ಬಂತು. ಚಂದ್ರ ಮತ್ತವನ ಸುತ್ತಲಿನ ಆಕಾಶದತ್ತ ಪರೀಕ್ಷೆಯ ನೋಟ ಹರಿಸಿದೆ. ಮುಗಿಲುಗಳೆಲ್ಲಾ ಒಟ್ಟುಗೂಡಿ ದಿಗಂತದಲ್ಲಿ ಸಮುದ್ರದ ಹಾಸಿಗೆಯ ಮೇಲೆ ಉದ್ದೋಉದ್ದಕ್ಕೆ ಪವಡಿಸಿಬಿಟ್ಟಿದ್ದರಿಂದ ಇಡೀ ಆಗಸ ಒಂದು ಕಲೆಯೂ ಇಲ್ಲದೇ ಶುಭ್ರವಾಗಿತ್ತು.

ನಾನು ಚಾಯ್ ಕಪ್ ಹಿಡಿದು ಹಿಂತಿರುಗುವವರೆಗೂ ಚಂದ್ರ ಹಾಗೇ ನಸು ಬೆಳಕು ಚೆಲ್ಲುತ್ತಲೇ ಇರುತ್ತಾನೆ. ಅದರಲ್ಲಿ ಸಂಶಯವಿಲ್ಲ. ಗಾಢ ನಿದ್ರೆಯಲ್ಲಿರುವ ಆಕಾಶಕ್ಕಂತೂ ಜಾರಿ ಕಾಲ ಬಳಿ ಸೇರಿದ ಹೊದಿಕೆಯನ್ನು ಮೈಮೇಲೆಳೆದುಕೊಳ್ಳುವಷ್ಟು ಎಚ್ಚರ ಆಗುವುದಿಲ್ಲ. ಅದರಲ್ಲೂ ಸಂಶಯವಿಲ್ಲ. ಕಣ್ಣಲ್ಲಿ ಚಂದ್ರ, ಕೈಯಲ್ಲಿ ಚಹಾ ಲೋಟ, ಸಮುದ್ರದಂಡೆಯಲ್ಲಿ ಅಲೆಗಳ ತೆಳು ಭೋರ್ಗರೆತ, ನನ್ನ ತುಟಿಗಳಲ್ಲಿ ಸವಿ ಚಾಯ್‌ನ ನಸು ಸೊರ್‌ಗರೆತ! ಸರಿಸುಮಾರು ಮರೆತೇಹೋಗಿದ್ದ ಕಥೆಗಾರಿಕೆಯನ್ನು ಮತ್ತೆ ಕೈಗೆತ್ತಿಕೊಂಡು ಒಂದೇ ಸಿಟಿಂಗ್‌ನಲ್ಲಿ ಕಥೆ ಬರೆದು ಮುಗಿಸಿದ ಸಂಭ್ರಮಾಚರಣೆ ಇದಕ್ಕಿಂತ ಸೊಗಸಾಗಿರಲು ಸಾಧ್ಯವಿಲ್ಲ!

ಹಿಂದಕ್ಕೆ ಹೊರಳಿದೆ. ಗಕ್ಕನೆ ನಿಂತೆ.

ಆಧಾ ಹೈ ಚಂದ್ರಮಾ

ರಾತ್ ಆಧೀ

ರೆಹ್ ನ ಜಾಯೇ ತೇರೀ ಮೇರೀ

ಬಾತ್ ಆಧೀ

ಮುಲಾಖಾತ್ ಆಧೀ

ಇಡೀ ಪ್ರಕೃತಿಯೇ ಸಣ್ಣಗೆ ಸ್ವರವೆತ್ತಿ ಹಾಡಿದಂತೆ ಸುಶ್ರಾವ್ಯ ಗಾನ!

ತಟಪಟ ಸದ್ದಿನೊಂದಿಗೆ ಸುತ್ತಮುತ್ತ ಹಲವು ಕಿಟಕಿಗಳು ತೆರೆದುಕೊಂಡವು. ಗಾನ ನಿಂತುಹೋಯಿತು. ನಾನು ನನ್ನ ಹೆಜ್ಜೆಯಲ್ಲೇ ಸ್ಥಾವರವಾದೆ.

'ಯಾರು ಹಾಡಿದ್ದು?', 'ಟೀವಿ ಅಲ್ಲ ಅದು! ಮ್ಯೂಸಿಕ್ ಸಿಸ್ಟಂ ಸಹಾ ಅಲ್ಲ!', 'ಹ್ಞೂಂ, ಯೂಟ್ಯೂಬ್ ವಿಡಿಯೊ ಸಹಾ ಅಲ್ಲ ಅನಿಸುತ್ತೆ', 'ಹೌದೂ ಯಾರೋ ಬಾಯಿ ತೆರೆದು ಹಾಡಿದ್ದು!'

ಅಕ್ಕಪಕ್ಕದಿಂದ ಅಚ್ಚರಿಯ ಉದ್ಗಾರಗಳು, ಕುತೂಹಲದ ಮಾತುಗಳು ಒಂದರ ಮೇಲೊಂದು ಉರುಳಾಡಿದವು. ಕೊನೆಯಲ್ಲಿ ಕಿವಿಗೆ ಬಿದ್ದದ್ದು, 'ಸಪ್ತಮಿಯಂದು ಸಪ್ತಪದಿಯ ಕನಸು ಕಾಣ್ತಾ ಇರೋ ಯಾರೋ ಆಸೆಗಳ ವಯಸ್ಸಿನ ತರಳೆ ಸ್ವರ ತೆಗೆದದ್ದು!' ಎಂಬ ಅರೆನಿದ್ದೆಯ ದನಿಯ ಷರಾ.

ನಾನು ಚಾಯ್ ಮರೆತೆ.

ಕ್ಷಣದಲ್ಲಿ ಊರು ಮತ್ತೆ ಮೌನಕ್ಕೆ ಜಾರಿ ಹೋಯಿತು. ಹಾಡು ಮತ್ತೆ ಆರಂಭವಾಗುತ್ತದೇನೋ ಎಂದು ನಾನು ಆಸೆಯಿಂದ ಕಾದೆ. ಉಹ್ಞೂಂ, ಅದು ತೇಲಿಬಂದಂತೇ ಕರಗಿ ಹರಿದುಹೋಗಿತ್ತು. ಚಂದ್ರನತ್ತ ನಿರೀಕ್ಷೆಯ ನೋಟ ಹೊರಳಿಸಿದೆ. ಅವನಲ್ಲಿ ಅದೇ ಅಮಾಯಕತೆ. ಮುಗಿಲುಸಾಲಿನ ಒಂದಂಚು ಮೇಲೆದ್ದು ಅವನ ಮೊನೆಗೊಂಬುಗಳತ್ತ ಮುಂಬರಿಯುತ್ತಿತ್ತು, ಅಲೆಗಳ ಹಾಸಿಗೆಯ ಮೇಲೆ ದಿಗಂತದ ಗೋಡೆಗೊತ್ತಿರಿಸಿಕೊಂಡು ಪವಡಿಸಿದ್ದ ಮೋಡಷೋಡಸಿ ಹಾಡಿನಿಂದ ಅರೆಎಚ್ಚರಗೊಂಡು ಚಂದ್ರಮನತ್ತ ಆಸೆಯಿಂದ ಕೈಚಾಚಹೊರಟಂತೆ.

ನಿರಾಸೆಯಿಂದ ಎಡಕ್ಕೆ ಹೊರಳಿದೆ. ನೋಟವನ್ನು ಇಡಿಯಾಗಿ ಸುತ್ತಿಸಿ ಮತ್ತೆ ಹಿಂದಕ್ಕೆ ತರುತ್ತಿದ್ದಂತೆ ಹತ್ತಿರದಲ್ಲೇ ಏನೋ ಸರಬರಗುಟ್ಟಿದ ಶಬ್ದ! ನನ್ನ ಕಿವಿಗಳು ನಿಮಿರಿದವು, ನೋಟ ಇಂಗ್ಲಿಷ್‌ನ 'ಎಲ್' ಅಕ್ಷರದಾಕಾರದ ಬಾಲ್ಕನಿಯ ಇನ್ನೊಂದು ಅಂಚಿಗೆ ಸರಿಯಿತು. ಅತ್ತ ನಡೆದೆ. ಕಿವಿಗೆ ಬಿದ್ದ ಹೆಜ್ಜೆ ಸದ್ದು ನನ್ನದಲ್ಲ. ಹೊಸ ಅರಿವೆಯೊಳಗಡಗಿದ ಪಾದಗಳು ಒಂದೊಂದೇ ಹೆಜ್ಜೆಯಲ್ಲಿ ಸರಿದಂಥ ನವುರು ನವುರು ಸಪ್ಪಳ ಅದು.

ಹತ್ತಡಿ ಅಗಲದ ಕಿರು ಓಣಿಯಾಚೆ ಉದ್ದಕ್ಕೆ ನಿಂತಿದ್ದ ನಾಲ್ಕು ಅಂತಸ್ತುಗಳ ಹೊಚ್ಚಹೊಸ ಸರ್ಕಾರಿ ಕಟ್ಟಡದ ನೀಲಗಪ್ಪು ಆಕ್ರಿಲಿಕ್ ಗೋಡೆಗಳಲ್ಲಿ ಎಂದಿನ ರಾತ್ರಿಯಂತೆ ಯಾವುದೇ ಚಲನೆ ಕಾಣಲಿಲ್ಲ. ಈ ಪೆಡಂಭೂತದಂಥ ಕಟ್ಟಡ ಹೀಗೆ ಕಣ್ಣೆದುರೇ ಬಿದ್ದುಕೊಂಡಿರದಿದ್ದರೆ ಸಮುದ್ರ ನನಗೆ ಇನ್ನಷ್ಟು ವಿಶಾಲವಾಗುತ್ತಿತ್ತಲ್ಲ ಎಂದು ಒಂದೂವರೆ ತಿಂಗಳ ಹಿಂದೆ ಯೂನಿವರ್ಸಿಟಿ ಅಪಾಯಿಂಟ್‌ಮೆಂಟ್ ಆರ್ಡರ್ ಹಿಡಿದು ಈ ಊರಿಗೆ ಬಂದು ಈ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತವ್ಯ ಹೂಡಿದ ಮೊದಲ ರಾತ್ರಿಯೇ ಅನಿಸಿತ್ತು. ಈಗಲೂ ಅನಿಸಿತು.

ಮತ್ತೆ ಏನೋ ಸರಿದ ಸದ್ದು! ಈಗದು ಕಾಲ ಕೆಳಗೇ! ಇದೇನು ವಿಚಿತ್ರ!

ಸರಕ್ಕನೆ ತಲೆ ಕೆಳಗಿಳಿಸಹೋದೆ. ಕೊರಳು ಎರಡು ಅಂಗುಲ ಕೆಳಕ್ಕಿಳಿದು ಯಾರೋ ತಡೆದು ನಿಲ್ಲಿಸಿದಂತೆ ಥಟ್ಟನೆ ನಿಂತುಬಿಟ್ಟಿತು. ನೋಟ ಎದುರಿನ ಕಟ್ಟಡದ ಎರಡನೆಯ ಅಂತಸ್ತಿನ ಆಕ್ರಿಲಿಕ್ ಗೋಡೆಯ ಮೇಲೆ ಸ್ಥಿರಗೊಂಡು ನಿಂತಾಗಿತ್ತು.

ನನಗೆ ಮತ್ತೆ ಶಬ್ದ ಕೇಳಿಬರಲಿಲ್ಲ. ಆದರೆ ಎದುರಿನ ಆಕ್ರಿಲಿಕ್ ಗೋಡೆಯಲ್ಲಿ ಚಲನೆ ಕಂಡಿತು!

ನಾನು ಅಚ್ಚರಿಯಿಂದ ಅಲ್ಲೇ ನೋಟ ಕೀಲಿಸಿದೆ. ಅಲ್ಲಿ ಪರದೆ ಸರಿಯುತ್ತಿತ್ತು! ನಾನು ನೋಡಿಯೇ ನೋಡಿದೆ. ಪರದೆ ಎರಡಾಗಿ ಎರಡೂ ದಿಕ್ಕಿಗೆ ಸರಿದುಹೋಯಿತು. ಆದರೆ ಶಬ್ದ ಬಂದದ್ದು ಅಲ್ಲಿಂದಲ್ಲ, ನನಗೆ ತೀರಾ ಹತ್ತಿರದಲ್ಲೇ! ಬಹುಶಃ ಕೆಳಗಿನಿಂದ. ಬೆರಗಿನಲ್ಲಿ ಕೆಳಗೆ ಬಾಗಲು ಹೋದೆ. ಆಗಲಿಲ್ಲ.

ಎದುರಿನ ಆಕ್ರಿಲಿಕ್ ಗೋಡೆಯಲ್ಲಿ ಚಕ್ಕನೆ ಮೂಡಿದ ಬೆಳಕು ನನ್ನ ಕಣ್ಣುಗಳನ್ನು ತನ್ನತ್ತಲೇ ಕಟ್ಟಿಹಾಕಿಕೊಂಡಿತ್ತು!

ಆ ತೆಳು ಬೆಳಕಿನಲ್ಲಿ ಕಂಡದ್ದು!

ಕೆಂಪು ಸೀರೆ–ರವಿಕೆಯಲ್ಲಿ ನಿಂತ ಗೊಂಬೆ!

ನಾನು ಬಿಟ್ಟ ಕಣ್ಣು ಬಿಟ್ಟಂತೆ ಅತ್ತಲೇ ನೋಡಿದೆ. ಗೊಂಬೆಯ ಸೆರಗು ಬಲಭುಜದ ಮೇಲೇರಿ ಹಿಂದೆ ಇಳಿದುಹೋಗಿತ್ತು, ವಜ್ರದ ಮೂಗುತಿ ಬಲಹೊರಳೆಯನ್ನಲಂಕರಿಸಿತ್ತು. ಮೇಲೇರಿ ಗಲ್ಲಕ್ಕೆ ಆಸರೆಯಾದ ಬಲಗೈಯಲ್ಲಿ ಮಡಿಸಿದ ಬೆರಳುಗಳ ಕೆಳಗೆ ಹೊಳೆಯುವ ಕಪ್ಪು ಪಟ್ಟಿಯ ಪುಟಾಣಿ ಬಿಳುಪು ಗಡಿಯಾರ. ಪೈಪೋಟಿಯಲ್ಲೆಂಬಂತೆ ಇನ್ನಷ್ಟು ಮೇಲೇರಿ ಮುಂಗುರುಳುಗಳನ್ನು ನೇರ್ಪುಗೊಳಿಸಿಕೊಂಡ ಎಡಗೈಯಲ್ಲಿ ಕೆಂಪು ಗಾಜಿನ ಬಳೆಗಳು ಲಘುವಾಗಿ ಝಣಕ್ಕೆಂದವು.

ಆದರೆ ಆ ನಿನಾದ ಕೇಳಿಬಂದದ್ದು ಅಲ್ಲಿಂದಲ್ಲ! ಅದು ನನ್ನ ಕಾಲ ಕೆಳಗೇ ಆರಂಭವಾಗಿ ನನ್ನ ಶರೀರದುದ್ದಕ್ಕೂ ಸರಸರನೆ ಮೇಲೇರುತ್ತಾ ಬಂದು ಕಿವಿಗಳಿಗೆ ತುಂಬಿಕೊಂಡಂತೆನಿಸಿತು.

ಕಣ್ಣುಗಳನ್ನು ಪಟಪಟನೆ ಬಡಿದುಕೊಂಡು ಎದುರಿನತ್ತ ತೆರೆದೆ.

ಅಲ್ಲಿ ಕಾಣುತ್ತಿರುವುದು ಪ್ರತಿಬಿಂಬ!

ಗೊಂಬೆಯ ತುಟಿಗಳು ಮೆಲ್ಲಮೆಲ್ಲನೆ ಬಿರಿದವು. ನನ್ನ ಮೆದುಳಿನಲ್ಲಿ ಮಿಂಚು!

ಗೊಂಬೆಯ ಗುರುತು ನನಗೆ ಹತ್ತಿತ್ತು.

ಎಡಕ್ಕಿದ್ದ ಬೈತಲೆಯನ್ನು ಬಲಕ್ಕೆಳೆದು